# ಅಪ್ಪನ ಕನಸು ನನಸಾಗಿಸಿದ ಕೂಸು ಪ್ರತೀಕಾ

■ ವಿಶಾಖ ಎನ್.

ದೆಹಲಿಯ ಪ್ರದೀಪ್ ರಾವಲ್ ಸ್ವತಃ ಕ್ರಿಕೆಟ್ ಆಟಗಾರ. ವಿಶ್ವವಿದ್ಯಾಲಯ ತಂಡವನ್ನು ಪ್ರತಿನಿಧಿಸಿದ್ದವರು. ಬಿಸಿಸಿಐ ಲೆವೆಲ್ 2 ಅಂಪೈರ್ ಆಗಿಯೂ ಕೆಲಸ ಮಾಡುತ್ತಾರೆ. ಆದರೆ, ತಾವು ಅಂತರರಾಷ್ಟ್ರೀಯ ಕ್ರಿಕೆಟ್ ಆಡಬೇಕು ಎನ್ನುವ ಅವರ ಕನಸು ನನಸಾಗಿರಲಿಲ್ಲ. ಆ ಕನಸನ್ನು ಮಗ ಈಡೇರಿಸಬಹುದೇನೋ ಎಂಬ ಆಸೆ ಇತ್ತು. ಮಗ ಎಂಜಿನಿಯರ್ ಆಗಿ ನೆಲೆ ನಿಂತ. ಮಗಳು ಬಾಲ್ಯದಿಂದಲೇ ಅಪ್ಪನ ಕ್ರಿಕೆಟ್ ಕನಸನ್ನು ಕಣ್ಣಿಗೆ ಒತ್ತಿಕೊಂಡಳು. ಅದು ನನಸಾದದ್ದು 2024ರ ಡಿಸೆಂಬರ್‌ನಲ್ಲಿ, ವೆಸ್ಟ್ ಇಂಡೀಸ್ ಎದುರು ಮೊದಲ ಮಹಿಳೆಯರ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದಾಗ. ಅಪ್ಪನ ಕನಸನ್ನು ನನಸು ಮಾಡಿದ ಹುಡುಗಿಯೇ ಪ್ರತೀಕಾ ರಾವಲ್. ಭಾರತ ಮಹಿಳೆಯರ ಕ್ರಿಕೆಟ್ ತಂಡವು ವಿಶ್ವಕಪ್ ಪಂದ್ಯಗಳನ್ನು ಆಡುವ ಹೊತ್ತಿಗೆ ಸಿಕ್ಕ ಇಂಧನ ಪ್ರತೀಕಾ. ನ್ಯೂಜಿಲೆಂಡ್ ಎದುರು ಗೆಲ್ಲಲೇಬೇಕಿದ್ದ ಪಂದ್ಯದಲ್ಲಿ ಪ್ರತೀಕಾ 122 ರನ್ ಹೊಡೆದರು. ಸ್ಮೃತಿ ಮಂದಾನ ಅವರೊಟ್ಟಿಗೆ ಮೊದಲ ವಿಕೆಟ್‌ಗೆ 212 ರನ್‌ಗಳ ಮರೆಯಲಾಗದ ಜೊತೆಯಾಟ ಆಡಿದರು. ಆದರೆ, ಬಾಂಗ್ಲಾದೇಶ ಎದುರಿನ ಪಂದ್ಯದಲ್ಲಿ ಮಳೆ ಬಿದ್ದ ನೆಲದಲ್ಲಿ ಓಡುವಾಗ ಜಾರಿ, ಅವರ ಕಾಲು ಉಳುಕಿತು. ಹೀಗಾಗಿ ಆಸ್ಟ್ರೇಲಿಯಾ ವಿರುದ್ಧದ ಸೆಮಿಫೈನಲ್ ಪಂದ್ಯ ಆಡುವ ಅವಕಾಶದಿಂದ ವಂಚಿತರಾದರು.




ಪ್ರತೀಕಾ ಬ್ಯಾಟ್ ಹಿಡಿದದ್ದು ಮೂರು ವರ್ಷದ ಬಾಲಕಿಯಾಗಿದ್ದಾಗ. ತಂದೆಯೇ ಅವಳಿಗೆ ಕ್ರಿಕೆಟ್ ಮೂಲ ಪಾಠ ಕಲಿಸತೊಡಗಿದರು. ವಾರಗೆಯ ಹೆಣ್ಣುಮಕ್ಕಳು ಬ್ಯಾಟ್ ಹಿಡಿಯಲು ಪರದಾಡುತ್ತಿದ್ದ ಹೊತ್ತಿಗೆ ಇವಳು ಡ್ರೈವ್ ಮಾಡುವಷ್ಟು ಪಳಗಿದ್ದಳು. ಶಾಲಾ ಮೈದಾನದಲ್ಲಿ ಒಮ್ಮೆ ಕಾಲೇಜು ತಂಡದವರ ಎದುರು ಆಡುವ ಅವಕಾಶ ಸಿಕ್ಕಿತು. ಆಗಿನ್ನೂ ಪ್ರತೀಕಾಗೆ ಹತ್ತು ವರ್ಷ ವಯಸ್ಸು. ಆ ಪಂದ್ಯದಲ್ಲಿ ಅರ್ಧ ಶತಕ ಗಳಿಸಿದಳು. ತಂದೆಗೆ ಮಗಳ ಮೇಲಿನ ಭರವಸೆ ಗಟ್ಟಿಯಾದದ್ದು ಆಗಲೇ.

ವಿವಿಧ ವಯೋಮಾನ ವರ್ಗಗಳಲ್ಲಿ ಕ್ರಿಕೆಟ್ ಆಡುತ್ತಾ ಬೆಳೆಯುತ್ತಿದ್ದ ಹಂತದಲ್ಲಿ ಒಮ್ಮೆ ಈ ಹುಡುಗಿ ಮಾಜಿ ಕ್ರಿಕೆಟ್ ಆಟಗಾರ್ತಿ ದೀಪ್ತಿ ಧ್ಯಾನಿ ಅವರ ಕಣ್ಣಿಗೆ ಬಿದ್ದಳು. ಇವಳಲ್ಲಿನ ಪ್ರಚ್ಛನ್ನ ಶಕ್ತಿ ನೋಡಿದ್ದೇ ಅವರು ತರಬೇತಿ ಕೊಡಲು ಆಯ್ಕೆ ಮಾಡಿಕೊಂಡರು. ಪ್ರತೀಕಾ ಹೊಡೆದ ಡ್ರೈವ್‌ಗಳು ದೀಪ್ತಿ ಅವರಿಗೆ ಹಿಡಿಸಿದ್ದವು. ತರಬೇತಿ ನೀಡುವ ಹೊತ್ತಿಗೆ ಅವರು ಈ ಹುಡುಗಿಯ ಫಿಟ್ನೆಸ್ ಕುರಿತ ಕಾಳಜಿ ಕಂಡು ಬೆರಗಾದರು. ಕ್ರಿಕೆಟಿಗರು ಫಿಟ್ ಆಗುವುದು ಎಂದರೆ ಕೇವಲ ಜಿಮ್‌ನಲ್ಲಿ ಮಾಂಸಖಂಡ ಹುರಿಗೊಳಿಸುವುದು ಅಲ್ಲ. ಗಾಯಗಳಿಂದ ದೂರ ಉಳಿಯಲು ತಕ್ಕಂತೆ ದೇಹ ಲೀಲಾಜಾಲವಾಗಿ ಹೊಂದಿಕೊಳ್ಳುವಂತೆ ಮಾರ್ಪಡಿಸುವುದು ಎಂಬ ಸೂಕ್ಷ್ಮವನ್ನೂ ತಿಳಿಸಿಕೊಟ್ಟರು.

ಪ್ರತೀಕಾಗೆ ಆಟದ ವರಸೆಗಳು ತಿಳಿದಿದ್ದವು. ದೇಸಿ ಕ್ರಿಕೆಟ್‌ನಲ್ಲಿ ಅವರು ಸ್ಥಿರ ಪ್ರದರ್ಶನ ನೀಡುತ್ತಾ ಬಂದರು. ಆದರೂ ಕಳೆದ ವರ್ಷ ಡಬ್ಲ್ಯೂಪಿಎಲ್ (ವಿಮೆನ್ಸ್ ಪ್ರೀಮಿಯರ್ ಲೀಗ್)ಗೆ ಆಡುವ ತಂಡಗಳಿಗೆ ಅವರನ್ನು ಹರಾಜಿನಲ್ಲಿ ಯಾರೂ ಪರಿಗಣಿಸಲಿಲ್ಲ. ಹೀಗಿದ್ದೂ ಹೆಚ್ಚು ಕಾಲ ಅವರನ್ನು ಉಪೇಕ್ಷಿಸುವುದು ಸಾಧ್ಯ ಆಗಲಿಲ್ಲ. ಅಂತರರಾಷ್ಟ್ರೀಯ ತಂಡಕ್ಕೆ ಅವರು ಆಯ್ಕೆಯಾದರು. ತಾವು ಆಡಿದ ಆರನೇ ಏಕದಿನ ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯದಲ್ಲೇ ಅವರು ಐರ್ಲೆಂಡ್ ತಂಡದ ಎದುರು 154 ರನ್ ಕಲೆಹಾಕಿ, ತಮ್ಮ ಆಯ್ಕೆಯನ್ನು ಸಮರ್ಥಿಸಿಕೊಂಡರು. 23 ಏಕದಿನ ಪಂದ್ಯಗಳಲ್ಲಿ 50ಕ್ಕೂ ಹೆಚ್ಚು ಸರಾಸರಿಯಲ್ಲಿ ಪ್ರತೀಕಾ ರನ್ ಗಳಿಸಿರುವುದು ಅವರ ಸ್ಥಿರತೆಗೆ ಸಾಕ್ಷಿ. 2021ರಲ್ಲಿ ಭಾರತ ಸೀನಿಯರ್ಸ್ ಮಹಿಳೆಯರ ತಂಡವನ್ನು ಪ್ರತಿನಿಧಿಸಲು ಅವರು ಆರಂಭಿಸಿದ್ದು. 2023–24ರ ಸಾಲಿನಲ್ಲಿ ಈ ಸ್ವರೂಪದ ಕ್ರಿಕೆಟ್ ನಲ್ಲಿ ಅತಿ ಹೆಚ್ಚು ರನ್ ಗಳಿಸಿದವರ ಪಟ್ಟಿಯಲ್ಲಿದ್ದ ಎರಡನೇ ಹೆಸರು ಪ್ರತೀಕಾ ಅವರದ್ದು. 68ಕ್ಕೂ ಹೆಚ್ಚು ಸರಾಸರಿಯಲ್ಲಿ 411 ರನ್ ಕಲೆಹಾಕಿದ್ದರು. ಹೀಗಾಗಿ ಅವರನ್ನು ದೀರ್ಘಾವಧಿ ಉಪೇಕ್ಷಿಸಲು ಆಯ್ಕೆಗಾರರಿಗೆ ಆಗಲಿಲ್ಲ.

ಪ್ರತೀಕಾ ಗುರಿ ನೆಟ್ಟ ಹುಡುಗಿ. ಒಂಬತ್ತನೇ ತರಗತಿಯಲ್ಲಿ ಇರುವಾಗಲೇ ತಾನು ಮನಃಶಾಸ್ತ್ರ ಓದಬೇಕು ಎಂದು ನಿರ್ಧಾರ ಮಾಡಿದ್ದರು. ಅದಕ್ಕೆ ತಕ್ಕಂತೆ ಅದೇ ವಿಷಯದಲ್ಲಿ ಪದವಿಯನ್ನೂ ಪಡೆದರು. ಅದರಿಂದ ಅವರ ಕ್ರಿಕೆಟ್‌ಗೂ ಅನುಕೂಲ ಆಗುತ್ತಿರುವುದು ಸ್ಪಷ್ಟ. ಇಪ್ಪತ್ತೈದರ ಈ ಯುವತಿಯನ್ನೀಗ ಕ್ರಿಕೆಟ್‌ನ ಭವಿಷ್ಯದ ತಾರೆ ಎಂದೇ ಬಣ್ಣಿಸುತ್ತಿದ್ದಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65